ಜೈನ್ ಕಾಲೇಜ್, ಜಯನಗರ. 9ನೇ ಹಂತ, ಬೆಂಗಳೂರು.

ದ್ವಿತೀಯ ಪಿ.ಯು.ಸಿ ಮಾದರಿ ಪ್ರಶ್ನೆ ಪತ್ರಿಕೆ – 2018

**ಸಮಯ : 3.15 ಗಂಟೆ** | **ವಿಷಯ:– ಕನ್ನಡ** | **ಅಂಕಗಳು–100**

---

## ಅ–ವಿಭಾಗ

**I ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : 10x1=10**

1. ಮಯ ತನೂಜೆ ಎಂದರೆ ಯಾರು ?
2. ಯಾವ ಮಾತಿಗೆ ಕೊನೆಯಿಲ್ಲವೆಂದು ಪುರಂದರ ದಾಸರು ಹೇಳಿದ್ದಾರೆ?
3. ಮುದುಕಿ ಯಾವ ದೇವರಿಗೆ ಹರಕೆ ಹೊತ್ತಳು?
4. ಕವಯಿತ್ರಿ ಮುಗಿಲತ್ತ ಕೈಚಾಚಿ ಏಕೆ ನಿಂತಿದ್ದಾರೆ?
5. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು?
6. ಹೊಳೆ ಯಾವುದಕ್ಕೆ ಹೊಂಚುಹಾಕುತ್ತಿರುತ್ತದೆ?
7. ಕಲಿಯುಗದ ಅಮೃತ ಯಾವುದು?
8. ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು?
9. ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು?
10. ಮುನ್ಸಿಪಾಲಿಟಿ ಪ್ರೆಸಿಡೆಂಟರ ಹೆಸರೇನು?

## ಆ–ವಿಭಾಗ

**II ಅ. ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ : 4x2=8**

11. ಕೊಲಲಕ್ಷಮರೆಂದು ದ್ರೌಪದಿ ಯಾರನ್ನು ಕುರಿತು ಹೇಳಿದ್ದಾಳೆ?
12. ಧನ ಮತ್ತು ಸುತ ವಿಷಯಗಳಲ್ಲಿ ಸೋಮನಾಥನ ಅಭಿಪ್ರಾಯವೇನು?
13. ಮಗು ಏನನ್ನು ಕುಡಿದು ಬೆಳೆಯುವುದು?
14. ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ?
15. ಹತ್ತಿಯ ಬೀಜ ಲೋಕದ ಹಿತಕ್ಕೆ ತನ್ನನ್ನು ಹೇಗೆ ಸುಟ್ಟುಕೊಳ್ಳುತ್ತದೆ?

**ಆ. ಕೆಳಗಿನ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ : 3x2=6**

16. ಬಸಲಿಂಗನಿಗೆ ತನ್ನ ಕಷ್ಟದ ಮುಂದೆ ಯಾವುವು ಗೌಣವಾಗಿ ಕಾಣತೊಡಗಿದವು?
17. ಮಾರ್ಷ್‌ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?
18. ಸೀತಾಳ ಬಯಕೆ ನಂಬಿಕೆಗಳು ಹೇಗಿದ್ದವು?
19. ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?

**ಇ. ಕೆಳಗಿನ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ : 3x2=6**

20. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
21. ಕಾಡಪ್ಪ ಶೆಟ್ಟರು ಯಾವ ವರ್ತಮಾನವನ್ನು ಮುಟ್ಟಿಸಿದರು?
22. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?
23. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ–ವಿಭಾಗ

**III ಅ. ಕೆಳಗಿನ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: 2x3=6**

24. ಧರೆಹತ್ತಿ ಉರಿದರೆ ನಿಲಲುಬಾರದು.
25. ಆಪತ್ತಿನೊಳ್ ಮಣಿದುಂ ನೋಡದ ಬಂಧುವೇತಕ್ಕೆ
26. ಹಿತ್ತಾಳೆಗಿಂತ ಬಲುಹೀನ.

**ಆ. ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: 1x3=3**

27. ಅವರು ನನ್ನಷ್ಟೇ ಒಳ್ಳೆಯ ಡಾಕ್ಟರು, ಏನೂ ತಪ್ಪು ತಿಳಿಯಬೇಡ.

28. ಇದೇ ಲೋಟವಲ್ಲವೇ.... ತನ್ನ ಬೆವರಿನ ಬೆಲೆ ಕಳೆದದ್ದು.

**ಇ. ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **1x3=3**

29. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೋ.
30. ಕಂಬದ ಮೇಲೆ ಯಾರೋ ಕೈಲಾಸ ಕಂಡ ಹಾಗೆ ಇದೆಯಲ್ಲಾ!

**ಈ–ವಿಭಾಗ**

**IV ಅ. ಕೆಳಗಿನ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :** **3x4=12**

31. ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.
32. ತನಗಾದ ಅವಮಾನವನ್ನು ದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿ.
33. ಬಾಳಿನ ಅಶಾಶ್ವತತೆ ಮತ್ತು ಪ್ರಕೃತಿಯ ನಿತ್ಯನೂತನತೆಯ ಗುಣವನ್ನು ಬೆಳಗು ಜಾವ ಕವನದಲ್ಲಿ ಕವಿ ಹೇಗೆ ವಿವರಿಸಿದ್ದಾರೆ?
34. ತಂದೆ–ತಾಯಿಗಳು ಮಗುವಿಗೆ ಗೋಚರಿಸುವ ಬಗೆಯನ್ನು ವಿವರಿಸಿ.

**ಆ. ಕೆಳಗಿನ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :** **2x4=8**

35. ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಲೇಖಕರು ಯಾವ ಕಾರಣಗಳನ್ನು ಉದಾಹರಿಸುತ್ತಾರೆ?
36. ತಮ್ಮನ್ನು ಭೇಟಿಯಾದ ಮಕ್ಕಳಿಗೆ ಕಲಾಂ ಹೇಳಿದ್ದೇನು?
37. ಮುದ್ದಣ–ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.

**ಇ. ಕೆಳಗಿನ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :** **2x4=8**

38. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.
39. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದ.
40. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು?

**ಉ–ವಿಭಾಗ**

**V ಅ. ಈ ಕೆಳಗಿನ ಯಾವುದಾದರೂ ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ:** **1x5=5**

41.
ಪೊಸಗಾರ ಸಿಡಿಲ ಮಸಕಮ
ನಸಕಜೆದು ಕೃತಾಂತ ಜಿಹ್ವೆ ಪೊಡಕರಿಸುವವೋಲ್
ಬೆಸಸು ಬೆಸಸೆಂದು ಕರಮ
ರ್ವಿಸಿ ಸನ್ನಿದವಾಯ್ತು ವಿದ್ಯೆ ರಾವಣನಿದಿರೊಳ್

42.
ಯಾವಾಗ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ
ಮೊದಲಾಗಲೀಗ, ಅಂಗಡಿಯ ಕದವ ಈ ಕ್ಷಣವೇ ತೆರೆಯ ಹೇಳಿ
ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣ ಉರುಳಿ
ಹೋದವರು ತಿರುಗಿ ಬಂದಾರೆ, ಅವರು ಬರಲಿಕ್ಕೆ ಇಲ್ಲ ಮರಳಿ

**ಆ. ಭಾಷಾಭ್ಯಾಸ: ಈ ಕೆಳಗಿನ ಆರು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ :** **6x2=12**

43. ಈ ಪದಗಳ ಅರ್ಥ ಬರೆಯಿರಿ : ಕೃತಾಂತ, ಪರಿಭವ.
44. ಈ ಪದಗಳ ಸಮಾನಾರ್ಥಕ ಪದ ಬರೆಯಿರಿ: ಮರ್ಕಟ, ಚಿತ್ತ.
45. ಈ ಪದಗಳಿಗೆ ಗುಣವಾಚಕ ಬರೆಯಿರಿ: ಹೆಮ್ಮರ, ಪರದೇಶಿ.
46. ಈ ತತ್ಸಮಗಳಿಗೆ ತದ್ಬವ ಬರೆಯಿರಿ: ಯೋಗಿ, ಘೂಕಾ.
47. ಈ ಪದಗಳ ನಿಶೇಧರೂಪ ಬರೆಯಿರಿ: ಕೇಳುವರು, ಕರೆಯಿತು.
48. ಈ ನುಡಿಗಟ್ಟುಗಳನ್ನು ಸ್ವಂತವಾಕ್ಯದಲ್ಲಿ ಬಳಸಿರಿ: ಗಾಳಿಸುದ್ಧಿ, ಕೈಕೊಡು.
49. ಯಾವುದಾದರೂ ಎರಡು ದ್ವಿರುಕ್ತಿಗಳನ್ನು ಬರೆಯಿರಿ:

**ಇ. ಕೆಳಗಿನ ಯಾವುದಾದರೂ ಒಂದಕ್ಕೆ ಪ್ರಬಂಧ ಬರೆಯಿರಿ:** **1x5=5**

50. ಸ್ತ್ರೀ ಭ್ರೂಣಹತ್ಯೆಯಿಂದ ಎದುರಾಗುವ ಸಮಸ್ಯೆಗಳು
51. ಪುಸ್ತಕಗಳ ಮಹತ್ವ

**ಈ.: ಕೆಳಗಿನ ಯಾವುದಾದರೂ ಒಂದನ್ನು ಕುರಿತು ಪತ್ರಲೇಖನ ಬರೆಯಿರಿ:** **1x4=4**

52. ನಿಮ್ಮ ಕಾಲೇಜಿನಲ್ಲಿ ಆಚರಿಸಿದ ರಾಷ್ಟ್ರೀಯ ಹಬ್ಬವೊಂದನ್ನು ವಿವರಿಸುತ್ತಾ ನಿಮ್ಮ ಗೆಳೆಯ/ತಿಗೆ ಪತ್ರ ಬರೆಯಿರಿ.
53. ನಿಮ್ಮ ಊರಿನ ರಸ್ತೆಯನ್ನು ದುರಸ್ತಿ ಮಾಡುವಂತೆ ಕೋರಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಒಂದು ಪತ್ರ ಬರೆಯಿರಿ

**ಉ. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ.** **1x4=4**

54. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು
55. ತಾಳಿದವನು ಬಾಳಿಯಾನು.